ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಪ.ಜಾತಿ:ಪ.ಪಂ:ಬಿಡ್-ಹಂಚಿಕೆ:ರಿಯಾಯಿತಿ:2020/128 ದಿನಾಂಕ 19-03-2020

7 MAY 2020

## ಕಛೇರಿ ಆದೇಶ

ವಿಷಯ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿ ನಿಗಧಿಪಡಿಸಿ ಉಳಿದಿರುವ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್‌ಗಳಲ್ಲಿ ಸಾಮಾನ್ಯ ವರ್ಗದವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸಹ ಅರ್ಜಿ ಸಲ್ಲಿಸಿ ಬಿಡ್‌ನಲ್ಲಿ ಭಾಗವಹಿಸಿ, ಬಿಡ್ ಮೌಲ್ಯದಲ್ಲಿ ಶೇ.50ರಷ್ಟು ರಿಯಾಯಿತಿ ಪಡೆಯುತ್ತಿರುವ ಬಗ್ಗೆ. - ಸ್ಪಷ್ಟೀಕರಣ ಕುರಿತು.

ಉಲ್ಲೇಖ:
1. ಕೆ.ಎಸ್.ಎಸ್.ಐ.ಡಿ.ಸಿ. ನಿಗಮದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಗಳು 2004
2. Office Order No.GM-IE&FIN:ALT:RULE:AMNDT:2011 dated 18.05.2011
3. ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಕೈಗಾರಿಕೆ ಇಲಾಖೆ, ಬೆಂಗಳೂರು ಇವರಿಗೆ ಸಂಬೋಧಿಸಿ ಬರೆಯಲಾಗಿರುವ ಪತ್ರ ಸಂಖ್ಯೆ ವ್ಯನಿ:ಕೈವ:ಸಾಮಾನ್ಯ ಬಿಡ್:2019/225 ದಿನಾಂಕ:09.01.2020 .
4. ಸರ್ಕಾರ ಪ್ರಧಾನ ಕಾರ್ಯದರ್ಶಿ(ಎಂಎಸ್‌ಎಂಇ&ಗಣಿ), ವಾ&ಕೈಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ ಸಿಐ 11 ಸಿಎಸ್‌ಸಿ 2020 ದಿನಾಂಕ 20.02.2020.

-------

**ಪ್ರಸ್ತಾವನೆ:-**

ರಾಜ್ಯದಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಸಲುವಾಗಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಈವರೆವಿಗೂ ರಾಜ್ಯದ ವಿವಿಧ ಸ್ಥಳಗಳಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನೊಳಗೊಂಡ ಒಟ್ಟು 188 ಸಂಖ್ಯೆ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿದ್ದು, ಅವುಗಳಲ್ಲಿ ವಿವಿಧ ಮಾದರಿಗಳ ಕೈಗಾರಿಕಾ ಮಳಿಗೆಗಳು, ಗೋದಾಮು, ಫ್ಲಾಟ್ಸ್, ಅಂಗಡಿ ನಿರ್ಮಿಸಿ ಹಾಗೂ ವಿವಿಧ ವಿಸ್ತೀರ್ಣ / ಮಾದರಿಗಳ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಿ ನಿಗಮದ ಮಳಿಗೆ/ನಿವೇಶನಗಳ ನಿಯಮಾವಳಿಗಳ ಅನ್ವಯ ಅರ್ಹ ಆಸಕ್ತ ಉದಯೋನ್ಮುಖ ಸಣ್ಣ ಉದ್ದಿಮೆದಾರರುಗಳಿಗೆ ಮಳಿಗೆ/ಪ್ಲ್ಯಾಟ್ಸ್/ಗೋದಾಮು/ಅಂಗಡಿ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ.

ನಿಗಮವು ಅಭಿವೃದ್ಧಿಪಡಿಸಿರುವ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಮೀಸಲಿರಿಸಿ, ನಿಗಧಿಪಡಿಸಿ, ಉಳಿದಿರುವ ಮಳಿಗೆ/ನಿವೇಶನ/ಗೋದಾಮು/ಪ್ಲಾಟ್‌ಗಳಲ್ಲಿ ಸಾಮಾನ್ಯ ವರ್ಗದವರ ಜೊತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳೂ ಸಹ ಹಂಚಿಕೆಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ನಿಗಮದ ಪ್ರಚಲಿತ ಹಂಚಿಕೆ ನಿಯಮಗಳಲ್ಲಿರುವಂತೆ ಯಾವುದೇ ಒಂದು ಪ್ರತ್ಯೇಕ ಮಳಿಗೆ/ಫ್ಲ್ಯಾಟ್ಸ್/ಗೋದಾಮು/ಅಂಗಡಿ ಹಾಗೂ ನಿವೇಶನಗಳ ಹಂಚಿಕೆಗಾಗಿ 6 ಮತ್ತು 6 ಕ್ಕಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಗೊಂಡ ಸಂದರ್ಭದಲ್ಲಿ, ಸದರಿ ಅರ್ಜಿದಾರರುಗಳ ಸಮ್ಮುಖದಲ್ಲಿ **ಬಿಡ್ ಮುಖೇನ / ಹರಾಜು** (AUCTION) ಪ್ರಕ್ರಿಯೆಯನ್ನು ನಡೆಸಿ, ಅತಿ ಹೆಚ್ಚಿನ ಬಿಡ್ ಕೂಗಿದ ಅರ್ಜಿದಾರರಿಗೆ ಹಂಚಿಕೆ ಮಾಡಲಾಗುತ್ತಿದೆ.

ಅಂತೆಯೇ, ಬಿಡ್ ಪ್ರಕ್ರಿಯೆಯಲ್ಲಿ ಸಾಮಾನ್ಯ ವರ್ಗದ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿದಾರರುಗಳು ಬಿಡ್ ಕೂಗುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿದಾರರು ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುತ್ತಿದ್ದು, ಸರ್ಕಾರವು ಸದರಿ ಪ್ರವರ್ಗದ ಉದ್ದಿಮೆದಾರರುಗಳಿಗೆ ನಿವೇಶನದ ಮೌಲ್ಯದಲ್ಲಿ ಶೇಕಡಾ 50 ರಷ್ಟು ರಿಯಾಯಿತಿಯನ್ನು ನೀಡುತ್ತಿರುವ ಕಾರಣ, ಒಟ್ಟು ಬಿಡ್ ಮೊತ್ತದ ಶೇಕಡಾ 50 ರಷ್ಟು ರಿಯಾಯಿತಿ ಪಡೆಯುತ್ತಿರುವುದರಿಂದ, ಸದರಿ ಯೋಜನೆಯ ಪ್ರಯೋಜನವನ್ನು ಪಡೆಯುವ ಸಲುವಾಗಿ ಅತೀ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುತ್ತಿದ್ದು, ತತ್ಫಲಿತವಾಗಿ, ಸಾಮಾನ್ಯ ವರ್ಗಕ್ಕೆ ಸೇರಿದ ಅರ್ಜಿದಾರರುಗಳು ಅಷ್ಟೊಂದು ಹೆಚ್ಚಿನ ಮೊತ್ತಕ್ಕೆ ಬಿಡ್ ಕೂಗಲು ಸಾಧ್ಯವಾಗದೇ ತಕರಾರು / ಆಕ್ಷೇಪಣೆ ಮಾಡುತ್ತಿರುವುದರಿಂದಾಗಿ, ಬಿಡ್ ಪ್ರಕ್ರಿಯೆಯಲ್ಲಿ ತೀವ್ರ ಗೊಂದಲ ಉಂಟಾಗಿರುವ ಕಾರಣ, ಹಲವಾರು ಕಡೆ ಬಿಡ್ ಹಂಚಿಕೆ ಪ್ರಕ್ರಿಯೆಯನ್ನೇ ನಿಲ್ಲಿಸುವ ಪ್ರಮೇಯವು ಉದ್ಭವಿಸಿರುತ್ತದೆ.

ಸದರಿ ಗೊಂದಲಗಳು ಸೃಷ್ಟಿಯಾದ ಹಿನ್ನೆಲೆಯಲ್ಲಿ, ಹಂಚಿಕೆ ಮೀಸಲಾತಿಗೆ ಹೊರತಾಗಿರುವ ಕೈಗಾರಿಕಾ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ಸ್ ಇತ್ಯಾದಿಗಳ ಕಟ್ಟಡಗಳನ್ನು ಬಿಡ್ ಮಾಡುವ ಸಂದರ್ಭದಲ್ಲಿ ಬಿಡ್‌ನಲ್ಲಿ ಭಾಗವಹಿಸುವ

..2..

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿದಾರರುಗಳಿಗೆ ಆಯಾ ಮಳಿಗೆ/ನಿವೇಶನ/ ಗೋದಮು/ ಫ್ಲ್ಯಾಟ್ಸ್‌ಗಳ ಮೂಲ ಮೌಲ್ಯಕ್ಕೆ ಮಾತ್ರ ಶೇಕಡಾ 50 ರಷ್ಟು ರಿಯಾಯಿತಿಯನ್ನು ನೀಡುವುದು ಸೂಕ್ತವೇ? ಅಥವಾ ಒಟ್ಟು ಬಿಡ್ ಮೌಲ್ಯಕ್ಕೆ ಶೇಕಡಾ 50 ರಷ್ಟು ರಿಯಾಯಿತಿಯನ್ನು ವಿಸ್ತರಿಸುವುದು ಸೂಕ್ತವೇ? ಎಂಬುದರ ಬಗ್ಗೆ ಸರ್ಕಾರದ ಮಾರ್ಗದರ್ಶನ ಮತ್ತು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು ಇವರಿಗೆ ಉಲ್ಲೇಖ (3)ರಂತೆ ಪತ್ರ ಬರೆಯಲಾಗಿತ್ತು.

ಸದರಿ ಪತ್ರಕ್ಕೆ ಪ್ರತಿಕ್ರಿಯೆಯಾಗಿ, ಉಲ್ಲೇಖ (4)ರಲ್ಲಿನ ಸರ್ಕಾರದ ಪತ್ರದಲ್ಲಿ ಈ ಕೆಳಕಂಡಂತೆ ಸ್ಪಷ್ಟೀಕರಣ / ಮಾರ್ಗದರ್ಶನ ನೀಡಲಾಗಿರುತ್ತದೆ.

**"ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನೀಡುತ್ತಿರುವ ಶೇ.೫೦ರಷ್ಟು ಭೂ-ಸಹಾಯಧನವನ್ನು ನಿಗಮವು ನಿಗಧಿಪಡಿಸುವ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ಸ್‌ಗಳ ಮೂಲ ಮೌಲ್ಯಕ್ಕೆ ಮಾತ್ರ ಶೇ.೫೦ರಷ್ಟು ರಿಯಾಯಿತಿಯನ್ನು ನೀಡಬಹುದಾಗಿದ್ದು, ಅದರ ಮೇಲಿನ ಮೌಲ್ಯಕ್ಕೆ ರಿಯಾಯಿತಿ ರಹಿತ ಎಂದು ಪರಿಗಣಿಸಿ ಮೂಲ ಮೌಲ್ಯದ ಮೇಲಿನ ಬಿಡ್ ಮೌಲ್ಯವನ್ನು ಹಂಚಿಕೆದಾರರು ಭರಿಸಿಕೊಳ್ಳುವಂತೆ ಕ್ರಮವಹಿಸುವುದು"**

ಮೇಲೆ ನಮೂದಿಸಿರುವ ವಿವಿಧ ಅಂಶಗಳನ್ನು ಪರಿಶೀಲಿಸಿದ್ದು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಿದೆ.

<u>ನಿಗಮದ ಆದೇಶ ಸಂಖ್ಯೆ ಸಮನ್ವಯ:ಪ.ಜಾ:ಪ.ಪಂ:ಬಿಡ್-ಹಂಚಿಕೆ:ರಿಯಾಯಿತಿ:2019 ಬೆಂಗಳೂರು, ದಿನಾಂಕ 19-03-2020.</u>

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟಿರುವ ವಿವಿಧ ಅಂಶಗಳು ಹಾಗೂ ದಿನಾಂಕ 20.02.2020ರ ಸರ್ಕಾರದ ಪತ್ರದಲ್ಲಿ ನೀಡಿರುವ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ, ಇನ್ನು ಮುಂದೆ ನಿಗಮವು ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆ ಮೀಸಲಾತಿಗೆ ಹೊರತಾಗಿರುವ ಕೈಗಾರಿಕಾ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ಸ್ ಇತ್ಯಾದಿ ಕಟ್ಟಡಗಳನ್ನು ಬಿಡ್ ಮೂಲಕ ಹಂಚಿಕೆ ಮಾಡುವ ಸಂದರ್ಭದಲ್ಲಿ ಬಿಡ್‌ನಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿಗಮವು ನಿಗಧಿಪಡಿಸಿರುವ / ನಿಗಧಿಪಡಿಸುವ ಆಯಾ ಮಳಿಗೆ / ನಿವೇಶನ / ಗೋದಾಮು / ಫ್ಲ್ಯಾಟ್‌ಗಳ **<u>ಮೂಲ ಮೌಲ್ಯಕ್ಕೆ ಮಾತ್ರವೇ (ORIGINAL COST ONLY) ಶೇಕಡಾ 50 ರಷ್ಟು ರಿಯಾಯಿತಿಯನ್ನು ನೀಡಬೇಕೆಂದು</u>** ಆದೇಶಿಸಿದೆ. ಅದರ ಮೇಲಿನ ಮೌಲ್ಯಕ್ಕೆ **'ರಿಯಾಯಿತಿ ರಹಿತ'** ಎಂಬುದಾಗಿ ಪರಿಗಣಿಸಿ, ಮೂಲ ಮೌಲ್ಯದ ಮೇಲಿನ ಬಿಡ್ ಮೌಲ್ಯವನ್ನು ಆಯಾ ಹಂಚಿಕೆದಾರರುಗಳೇ **<u>ಭರಿಸಿಕೊಳ್ಳುವಂತೆ</u>** ಅವಶ್ಯ ಕ್ರಮ ಕೈಗೊಳ್ಳುವಂತೆಯೂ ಆದೇಶಿಸಿದೆ.

ನಿಗಮದ ಎಲ್ಲಾ ಇಲಾಖಾ/ವಲಯ/ವಿಭಾಗ/ಶಾಖಾ ಮುಖ್ಯಸ್ಥರುಗಳು ಮೇಲಿನ ಆದೇಶದಲ್ಲಿನ ಸೂಚನೆಗಳನ್ನು **<u>ಕಟ್ಟುನಿಟ್ಟಾಗಿ</u>** ಹಾಗೂ **<u>ಕಡ್ಡಾಯವಾಗಿ</u>** ಪಾಲಿಸತಕ್ಕದ್ದು. ಸದರಿ ಸೂಚನೆಗಳನ್ನು ಪಾಲಿಸುವಲ್ಲಿ ಯಾವುದೇ ಉಲ್ಲಂಘನೆಯಾಗಿರುವುದು **(DEVIATION)** ಕಂಡುಬಂದಲ್ಲಿ, ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ನಿಗಮದ ನಿಯಮಾನುಸಾರ ಅವಶ್ಯ ಕ್ರಮ ಜರುಗಿಸಲಾಗುವುದು.

(ಮಹೇಶ್ ಬಿ. ಶಿರೂರ್)
ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು,(ಕೈವ),ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ ಮೈಸೂರು/ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಮುಂದಿನ ಅವಶ್ಯ ಕ್ರಮಗಳಿಗಾಗಿ.

**<u>ಪ್ರತಿ:</u>**

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ)/(ಸಮನ್ವಯ)/(ಸಾ.ಸಂ)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಆ.ಲೆ.ಪ)/(ವಾಣಿಜ್ಯ)/ವಲಯ-1 / ವಲಯ-2 ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವಾ.ಲೆ)/(ವ&ಕಾಲೆ)/(ಸಿಬ್ಬಂದಿ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ / ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
7. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
8. ವ್ಯ.ನಿ.,ರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.